ಕ್ರಮ ತೆಗೆದುಕೊಳ್ಳುತ್ತೇವೆ, ನಿಮ್ಮ ಬಳಿ ಇರುವ ವಿವರಗಳನ್ನು ಸ್ವಲ್ಪ ದಯವಿಟ್ಟು ಕಳಿಸಿಕೊಡಿ.

ವಿಷಯ (iii) : ಶ್ರೀಮತಿ ಸುನೀತ ಹೆಗ್ಗಣ್ಣನವರಿಗೆ ಏಡ್ಸ್ ಕಲುಷಿತ ರಕ್ತವನ್ನು ಕೊಟ್ಟಿರುವ ಬಗ್ಗೆ

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ನಿಪ್ಪಾಣಿ ಶಾಸಕರಾದ ಮಾನ್ಯ ಜೋತಿಯವರು ಅವರ ಕ್ಷೇತ್ರಕ್ಕೆ ಸಂಬಂಧಪಟ್ಟ ಸುನೀತಾ ವಸಂತ ಅನ್ನುವ ಹರಿಜನ ಹೆಣ್ಣುಮಗಳು ಮಹಾರಾಷ್ಟ್ರದ ಮೀರಜ್ ಸರ್ಕಾರಿ ಆಸ್ಪತ್ರೆಗೆ ಸೇರಿದ್ದಾಗ ಏಡ್ಸ್ ರೋಗ ಬಂದ ಬಗ್ಗೆ ಕಳೆದ ವರ್ಷ ಅವರು ಈ ಪ್ರಶ್ನೆ ಎತ್ತಿದ್ದರು, ಅದರ ನಂತರ ಈ ಒಂದು ವರ್ಷದಲ್ಲಾಗಿರುವ ಬೆಳವಣಿಗೆ ಅಂದರೆ ಅವರ ಗಂಡನಿಗೂ ಸಹ ಏಡ್ಸ್ ರೋಗ ಬಂದಿದೆ ಮತ್ತು ಅವರು ಸಾಯುವ ಸ್ಥಿತಿಯಲ್ಲಿ ಇದ್ದಾರೆ, ಆಕೆ ಗರ್ಭಣಿಯಾಗಿದ್ದಾಳಂತೆ ಆದ್ದರಿಂದ ಇದನ್ನು ನಮ್ಮ ಸರ್ಕಾರದಿಂದ ವಿಚಾರಣೆ ಮಾಡಬೇಕೆನ್ನುವುದು ಒಂದು ಎರಡನೆಯದು ಮುಖ್ಯ ಮಂತ್ರಿಗಳು ತಮ್ಮ ಪರಿಹಾರ ನಿಧಿಯಿಂದ ತತಕ್ಷಣ ಸ್ವಲ್ಪ ಹಣದ ಸಹಾಯ ಮಾಡಬೇಕು ಅಂತ ಅವರು ಕೇಳಿದ್ದಾರೆ. ಆರೋಗ್ಯ ಸಚಿವರು ಒಂದು ಹೇಳಿಕೆ ಕೊಡಬೇಕಾಗಿತ್ತು, ಆದರೆ ಹೇಳಿಕೆ ಬಂದಿಲ್ಲ. ಏಡ್ಸ್ ರೋಗದಿಂದ ಅವರಗಳು ಸಾಯುವ ಸ್ಥಿತಿಯನ್ನು ತಲುಪಿದ್ದಾರೆ. ಈ ಬಗ್ಗೆ ಆಕೆಗೆ ಮಹಾರಾಷ್ಟ್ರದ ಮೀರಜ್ ಸರ್ಕಾರಿ ಆಸ್ಪತ್ರೆಯಲ್ಲಿ ಸರಿಯಾಗಿ ತಪಾಸಣೆಯಾಗಿಲ್ಲ. ರೋಗ ಬಂದಿದ್ದು ಬ್ಲಡ್ ಟ್ರಾನ್ಸ್‌ಮಿಷನ್ ಮಾಡುವ ಸಂದರ್ಭದಲ್ಲಿ. ಇದನ್ನು ಸರ್ಕಾರದ ಗಮನಕ್ಕೆ ನಾವು ತಂದುಬಿಟ್ಟಿದ್ದೇವೆ, ಮಾನ್ಯ ಜೋಶಿಯವರು ಕೆಲಸದ ನಿಮಿತ್ತ ಅಧ್ಯಕ್ಷರ ಪರವಾನಿಗೆ ಪಡೆದು ಹೋಗಿದ್ದಾರೆ, ಆದ್ದರಿಂದ ಸ್ವಲ್ಪ ಹಣದ ಸಹಾಯವನ್ನು ತಾವು ಈ ರೋಗಕ್ಕೆ ತುತ್ತಾದವರಿಗೆ ಮಾಡಬೇಕು. ಈ ಬಗ್ಗೆ ಸರ್ಕಾರ ಭರವಸೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೆ ಈ ಬಗ್ಗೆ ಮಾನ್ಯ ಆರೋಗ್ಯ ಸಚಿವರ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡಬಯಸುತ್ತೇನೆ.

ಶ್ರೀ ಸುಭಾಷ್ ಎನ್. ಜೋಷಿಯವರು ದಿನಾಂಕ 5-7-90ರಂದು ಕರ್ನಾಟಕ ವಿಧಾನ ಮಂಡಲದಲ್ಲಿ ಈ ವಿಚಾರದ ಬಗ್ಗೆ ಪ್ರಸ್ತಾಪವನ್ನು ಮಾಡಿರುತ್ತಾರೆ. ಈ ವಿಷಯದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು ಅಂದಿನ ಮಾನ್ಯ ಆರೋಗ್ಯ ಸಚಿವೆಯರಾದ ಶ್ರೀಮತಿ, ಮನೋರಮಾ ಮದ್ವರಾಜ್ ರವರು ದಿನಾಂಕ 10-7-90ರಂದು ಮಹಾರಾಷ್ಟ್ರ ಸರ್ಕಾರದ ಮಾನ್ಯ ಆರೋಗ್ಯ ಸಚಿವರಿಗೆ ಪತ್ರ ಬರೆದು ಈ ಪ್ರಕರಣದ ಬಗ್ಗೆ ವಿವರಗಳನ್ನು ಕೋರಿದ್ದರು. ನಂತರ ದಿ.14-7-90ರಂದು ಮೀರಜ್‌ನ ವ್ಯಾಲೆಸ್ ಆಸ್ಪತ್ರೆಯ ನಿರ್ದೇಶಕರು ಈ ರಾಜ್ಯದ ಆರೋಗ್ಯ ನಿರ್ದೇಶಕರವರಿಗೆ ಪತ್ರ ಬರೆದು ಈ ಕೆಳಗಿನಂತೆ ವಿವರಗಳನ್ನು ನೀಡಿದ್ದಾರೆ.

ಶ್ರೀಮತಿ. ಸುನೀತ ಹೆಗ್ಗಣ್‌ನವರ ವಯಸ್ಸು 25, ಅಥಣಿ ತಾಲ್ಲೂಕು, ಬೆಳಗಾಂ ಜಿಲ್ಲೆ. ಇವರು ಹೃದಯ ರೋಗದಿಂದ ನರಳುತ್ತಿದ್ದು ಅವರಿಗೆ 11ನೇ ಜೂನ್ 1990ರಂದು ಹೃದ್ರೋಗ ಶಸ್ತ್ರ ಚಿಕಿತ್ಸೆ ಮಾಡಲಾಯಿತು. ಈ ಸಮಯದಲ್ಲಿ ಅವರಿಗೆ 3 ಬಾಟಲ್ ಬಿ ಪಾಸಿಟಿವ್ ರಕ್ತ ಕೊಡಲಾಯಿತು. ಈ ಬಾಟಲ್‌ಗಳಿಂದ ಕೊಟ್ಟಿದ್ದ ರಕ್ತ ಏಡ್ಸ್ ರೋಗದ ಪರೀಕ್ಷೆಗೆ ಒಳಪಡಿಸಿ ಅದು ನೆಗೆಟೀವ್

ಎಂದು ನಿರ್ದರಿಸಲಾಯಿತು. ಆದರೆ ಸದರಿ ರೋಗಿಯವರಿಗೆ ರಕ್ತದ ಒತ್ತಡ ಕಡಿಮೆಯಾಗಿ ಇನ್ನೊಂದು ಬಾಟಲ್ ರಕ್ತ ತಕ್ಷಣ ಕೊಡಬೇಕಾಯಿತು. ಇದನ್ನು ಕೊಡುವುದಕ್ಕೆ ಮುಂಚೆ ಏಡ್ಸ್ ಟೆಸ್ಟ್ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂದು ಮತ್ತು ರಕ್ತವನ್ನು ಕೊಟ್ಟ ನಂತರ ಪರೀಕ್ಷೆ ಮಾಡಿದಾಗ ಇದು ಏಡ್ಸ್ ಪಾಸಿಟೀವ್ ಎಂದು ತಿಳಿದು ಬಂದಿದೆಯೆಂದು ಅವರು ತಿಳಿಸಿರುತ್ತಾರೆ.

ಇದಾದ ಮೇಲೆ ಶ್ರೀಮತಿ. ಸುನೀತ ಹೆಗ್ಗಣ್ಣನವರ 3 ತಿಂಗಳ ಕಾಲ ಅದೇ ಆಸ್ಪತ್ರೆಯಲ್ಲಿದ್ದು ಮತ್ತು ಅವರು ಏಡ್ಸ್ ಪಾಸಿಟೀವ್‌ಗೆ ಒಳಗಾಗಿದ್ದಾರೆಂದು ನಿರ್ಧರಿಸಲಾಯಿತು. ಇದಾದ ನಂತರ ಈ ವಿಷಯ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಕೂಡ ಚರ್ಚೆಗೆ ಬಂದು ಮಹಾರಾಷ್ಟ್ರ ಸರ್ಕಾರವು ಈ ಪ್ರಕರಣದ ಹೊಣೆಗಾರಿಕೆಯನ್ನು ಸದರಿ ಆಸ್ಪತ್ರೆಗೆ ವಹಿಸಬೇಕೆಂದು ಆಜ್ಞಾಪಿಸಿದೆ. ಇದರ ಜೊತೆಗೆ ಮಹಾರಾಷ್ಟ್ರ ಸರ್ಕಾರ ಈ ಮಹಿಳೆಗೆ 5ಸಾವಿರ ರೂಪಾಯಿಗಳನ್ನು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಸಹಾಯ ನಿಧಿಯಿಂದ ಧನ ಸಹಾಯ ಮಾಡಿದ್ದಾರೆಂದು ಪತ್ರಿಕೆಗಳ ಮೂಲಕ ತಿಳಿದುಬಂದಿದೆ, ಹಾಗೂ ಶ್ರೀಮತಿ. ಸುನೀತ ಹೆಗ್ಗಣ್ಣನವರವರು ಪದೇ ಪದೇ ಈ ಆಸ್ಪತ್ರೆಗೆ ಬಂದು ಪರೀಕ್ಷೆ ಮಾಡಿಸಿಕೊಂಡಿದ್ದಾರೆಂದು ತಿಳಿದು ಬಂದಿದೆ.

ಏಡ್ಸ್ ರೋಗಕ್ಕೆ ನಿಖರವಾದ ಚಿಕಿತ್ಸೆ ಇಲ್ಲ, ಮತ್ತು ಈ ರೋಗ ಯಾವಾಗ ಬರುವುದೆಂದು ಕೂಡ ಹೇಳಲು ಬರುವುದಿಲ್ಲ. ಈ ಮಹಿಳೆಯ ಬಡತನ ಮತ್ತು ನಿಸ್ಸಹಾಯಕತೆಯನ್ನು ಗಮನದಲ್ಲಿಟ್ಟುಕೊಂಡು ಮಹಾರಾಷ್ಟ್ರ ಸರ್ಕಾರದಿಂದ ಇನ್ನೂ ಹೆಚ್ಚಿನ ಧನ ಸಹಾಯ ಕೊಡಿಸಲು ಪ್ರಯತ್ನಿಸಲಾಗುವುದು ಮತ್ತು ನಮ್ಮ ರಾಜ್ಯದ ಮುಖ್ಯಮಂತ್ರಿಗಳ ನಿಧಿಯಿಂದ ಧನ ಸಹಾಯವನ್ನು ನೀಡಲು ಶಿಫಾರಸ್ಸು ಮಾಡಲಾಗುವುದು. ಆಮೇಲೆ 5 ಸಾವಿರ ರೂ.ಗಳನ್ನು ಮುಖ್ಯಮಂತ್ರಿಗಳ ಸಹಾಯ ನಿಧಿಯಿಂದ ಮಂಜೂರು ಮಾಡಿ ಕಳುಹಿಸಲಾಗುವುದು.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೆ, ನಾನು ಒಂದು ಪ್ರಿವಿಲೇಜ್ ವಿಚಾರ ಪ್ರಸ್ತಾಪಿಸಿದ್ದೆ. ಮೊನ್ನೆ ನಮ್ಮ ಸಭೆಯ ಕಾರ್ಯಕಲಾಪದಲ್ಲಿ ನಾವು ಮಾತನಾಡಿದ ಮಾತುಗಳನ್ನು ಉಲ್ಲೇಖ ಮಾಡಿ ಹೊರಗಡೆಯಿಂದ ನಮಗೆ ಬೆದರಿಸುವ ಪತ್ರ ಬಂದಿತ್ತು.

ಅಧ್ಯಕ್ಷರು : ಅದರ ಪರಿಶೀಲನೆಗೋಸ್ಕರ ನಾನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಿ ಕೊಡುತ್ತಿದ್ದೇನೆ.

ಶಾಸನ ರಚನಾ ಕಾರ್ಯಕಲಾಪಗಳು

1991ರ ಕರ್ನಾಟಕ ರಾಜ್ಯ ಸಿವಿಲ್ ಸೇವಾ (ತಿದ್ದುಪಡಿ) ವಿಧೇಯಕ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ,1991ರ ಕರ್ನಾಟಕ ರಾಜ್ಯ ಸಿವಿಲ್ ಸೇವಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ ಈಗ ಕರ್ನಾಟಕ ಸ್ಟೇಟ್ ಸಿವಿಲ್ ಸರ್ವಿಸಸ್ ಕಾನೂನನ್ನು ಈ ಸದನದಲ್ಲಿ ನಾವು ಪಾಸ್ ಮಾಡಿದ್ದೇವೆ. ಅದು 1978ರಲ್ಲಿ ಪಾಸ್ ಆಯಿತು. ಆದರೆ, ಕರ್ನಾಟಕ ಶಾಸಕಾಂಗ